
Why are we here?
ನಾವು
ಇಲ್ಲೇಕಿದ್ದೇವೆ?

ಮುಖ್ಯವಾದ ಶಬ್ದಾರ್ಥಗಳು :

ಅಲ್ಲಾಹ್: ಅರಬಿ ಭಾಶೆಯಲ್ಲಿ ಅಲ್ಲಾಹ್ ಪದವು ಪ್ರಪಂಚದ ಏಕೈಕ ಸೃಷ್ಟಿಕರ್ತನೆಂಬ ಅರ್ಥ ಕೊಡುತ್ತದೆ. ಇದರ ಮುಖ್ಯ ಹಾಗೂ ಸರಳ ಅರ್ಥವೆಂದರೆ **'ಆರಾಧನೆಗೆ ಅರ್ಹನಾಗಿರುವ ಏಕೈಕ ದೇವ ಅವನೇ ಆಗಿದ್ದಾನೆ'** ಎಂಬುದಾಗಿದೆ. ವಿಶಿಷ್ಟವಾದ ಈ ಪದಕ್ಕೆ ಸರಿಸಮವಾದ ಪದ ಮತ್ತೊಂದಿರದೆ ಲಿಂಗ ಹಾಗೂ ಬಹುವಚನವನ್ನು ಸೂಚಿಸದಿರುವಂತಹಾ ಪದವಾಗಿದೆ. ಸೃಷ್ಟಿಕರ್ತನು ತನ್ನ ಕುರಿತು ಖುರ್'ಆನಿನಲ್ಲಿ ಹೇಳಿರುವನು **" ಹೇಳಿರಿ ಅಲ್ಲಾಹನು ಏಕೈಕನು, ಅಲ್ಲಾಹನು ನಿರಪರಕ್ಷನು ಮತ್ತು ಸರ್ವರೂ ಅವನ ಅವಲಂಬಿತರು, ಅವನು ಯಾರಿಗೂ ಜನ್ಮ ನೀಡಿಲ್ಲ, ಮತ್ತು ಅವನು ಯಾರಿಂದಲೂ ಜನ್ಮ ಪಡೆದಿಲ್ಲ, ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ."** (ಖುರ್'ಆನ್ 112:1–4)

ಇಸ್ಲಾಮ್; ಇಸ್ಲಾಮ್ ಎಂದರೆ ಶಾಂತಿ ಎಂದರ್ಥ. ಇನ್ನೊಂದು ಅರ್ಥದಲ್ಲಿ ವಿಧೇಯತೆ ಎಂಬುದಾಗಿದೆ. ದೈವಾಜ್ಞೆಯನ್ನು ವಿಧೇಯತೆಯಿಂದ ಅನುಸರಿಸುವುದು. ಅದು ನಮ್ಮ ಇಹ ಮತ್ತು ಪರಲೋಕದ ಪ್ರಗತಿಗೆಂದೇ ಆಗಿದೆ.

ಮುಸ್ಲಿಮ್: ಮುಸ್ಲಿಮ್ ಎಂದರೆ ದೇವನಿಗೆ ವಿಧೇಯನಾಗಿ ನಡೆಯುವವನೇ ಹೊರತು ವಂಶ–ಕುಲ, ಬಣ್ಣ–ಭಾಷೆ, ದೇಶ–ಪ್ರದೇಶದಿಂದ, ಅವನನ್ನು ಗುರುತಿಸಿಕೊಳ್ಳಲಾಗುವುದಿಲ್ಲ. ಈ ಹೆಸರು ಅನುಸರಣೆಯಿಂದ ಬರುವುದೇ ಹೊರತು, ಮುಸ್ಲಿಮ್ ತಂದೆ–ತಾಯಿರಿಗೆ ಜನಿಸುವುದರಿಂದಲ್ಲ. ಪ್ರತ್ಯೇಕ ಉಡುಪಿನ ಶೈಲಿ ಅಥವ ಉರ್ದು ಅರಬಿ ಹೆಸರುಗಳನ್ನು ಕಂಡು ಸಾಮಾನ್ಯರೂ ಸಹ ಗೊಂದಲಕ್ಕೀಡಾಗುತ್ತಿದ್ದಾರೆ.

ನಮ್ಮ ಅಸ್ತಿತ್ವ:

ನಮ್ಮ ಅಸ್ತಿತ್ವವು ಉದ್ದೇಶವುಳ್ಳದ್ದಾಗಿದೆಯೋ? ಅಥವ ನಮ್ಮ ಅಸ್ತಿತ್ವಕ್ಕೆ ಏನಾದರೂ ಉದ್ದೇಶವಿದೆಯೋ?

ನಾವು ಇಂದು ಜೀವಂತವಾಗಿರುವುದು ಒಂದು ಸತ್ಯ. ಹಾಗೆಯೇ ಒಂದು ದಿನ ಸಾವನ್ನಪ್ಪುವುದೂ ವಾಸ್ತವಿಕವಾಗಿದೆ. ಆದರೆ ಇಲ್ಲಿ ಉದ್ಭವಿಸುವ ಪ್ರಶ್ನೆಯೇನೆಂದರೆ, ನಾವು ಜೀವಿಸುವುದು ಮತ್ತು ಮರಣ ಹೊಂದುವುದ ಉದ್ದೇಶ ರಹಿತವಾಗಿದೆಯೇ? ಅಥವ ನಮ್ಮ ಅಸ್ತಿತ್ವಕ್ಕೆ ಏನಾದರೂ ಉದ್ದೇಶವಿದೆಯೇ?

ನಮ್ಮ ಸುತ್ತಮುತ್ತಲಿನ ಜಗತ್ತನ್ನು ನೋಡೋಣ, ಇಲ್ಲಿ ಯಾವುದಾದರೂ ವಸ್ತು ವಿನಾಃ ಕಾರಣ ಅಥವ– ಉದ್ದೇಶವಿಲ್ಲದೇ ಅಸ್ತಿತ್ವದಲ್ಲಿದೆಯೇ? ಖಂಡಿತ ಇಲ್ಲ. ಯಾವುದೂ ವಿನಃ ಕಾರಣ ಸಂಭವಿಸುವುದಿಲ್ಲ, ವಿಷಯ ಹೀಗಿರುವಾಗ ಇಡೀ ಮಾನವ ಕುಲವನ್ನು ಯಾವುದೇ ಉದ್ದೇಶವಿಲ್ಲದೇ ಸೃಷ್ಟಿಸಲಾಗಿದೆ ಎಂದು ನಾವು ಒಪ್ಪುವುದಾದರೂ ಹೇಗೆ? ಹೌದು ಖಂಡಿತವಾಗಿ ಭೂಮಿಯ ಮೇಲೆ ನಮ್ಮ ಅಸ್ತಿತ್ವದ ಹಿಂದೆ ಮಹತ್ವವಾದ ಒಂದು ಉದ್ದೇಶವಿದೆ. ಕಾಲ ಮಿಂಚುವ ಮೊದಲು ಪ್ರತಿಯೊಬ್ಬ ಮನುಷ್ಯನೂ ಈ ಉದ್ದೇಶವನ್ನು ಅರಿಯುವುದು ಅಗತ್ಯವಾಗಿದೆ.

ಈ ಭೂಮಿಯ ಮೇಲೆ ನಾವು ನಮ್ಮ ಇಚ್ಛೆಯಿಂದ ಬರಲಿಲ್ಲ. ನಮ್ಮ ಇಚ್ಛೆಯ ಪ್ರಕಾರ ಈ ಭೂಮಿಯಿಂದ ನಾವು ತೆರಳುವುದೂ ಇಲ್ಲ. ಆದ್ದರಿಂದ ಈ ಎಲ್ಲಾ ಕಾರ್ಯಗಳ ಹಿಂದೆ ಒಂದು ಸರ್ವೋಚ್ಚ ಶಕ್ತಿಯಿದೆ ಎಂದು ಸ್ಪಷ್ಟವಾಗುತ್ತದೆ. ಅದೇ ನಮ್ಮ ಹುಟ್ಟು ಮತ್ತು ಸಾವನ್ನು ನಿಯಂತ್ರಿಸುತ್ತಿದೆ.

ಆ ಸೃಷ್ಟಿಕರ್ತನೇ ನಮ್ಮನ್ನು ಪರೀಕ್ಷಿಸಲಿಕ್ಕಾಗಿ ಭುಮಿಯ ಮೇಲೆ ಸೃಷ್ಟಿಸಿದ್ದಾನೆ. ಅವನೇ ನಮ್ಮನ್ನು ಪ್ರತಿಯೊಬ್ಬ ಮನುಷ್ಯನಿಗೂ, ಈ ಪರೀಕ್ಷೆಯಲ್ಲಿ ಮಾರ್ಗದರ್ಶನ ಕೊಡಲು ಒಳಿತು ಮತ್ತು ಕೆಡುಕನ್ನು ಗ್ರಹಿಸುವ ಸಾಮರ್ಥ್ಯವನ್ನೂ ನೀಡಿದ್ದಾನೆ. ಆ ಸೃಷ್ಟಿಕರ್ತನು ತನ್ನ ಗ್ರಂಥದಲ್ಲಿ ಹೇಳಿದ್ದಾನೆ. **“ಮನುಷ್ಯನ ಆತ್ಮ ಹಾಗೂ ಅದನ್ನು ಸುಗಮಗೊಳಿಸಿದವನಾಣೆ, ಆ ಬಳಿಕ ಅವನು ಅದರ ದುಷ್ಟತೆಯನ್ನು ಮತ್ತು ಅದರ ಸಾತ್ವಿಕತೆಯನ್ನು ಅದಕ್ಕೆ ಪ್ರೇರೇಪಿಸಿದನು”** (ಖುರ್‌ಆನ್: ೯೧:೭,೮)

ಅವನು ಮನುಷ್ಯರಲ್ಲಿಯೇ ಸಂದೇಶವಾಕರನ್ನು ಆರಿಸಿ ಅವರ ಮುಖಾಂತರ ಜನರಿಗೆ ಮಾರ್ಗದಶನವನ್ನು ನೀಡುತ್ತಾನೆ, ಮತ್ತು ಅವನು ಅನೇಕ ದಿವ್ಯ ಗ್ರಂಥಗಳನ್ನು ಮನುಷ್ಯರ ಮಾರ್ಗದರ್ಶನಕ್ಕಾಗಿ ಅವತೀರ್ಣಗೊಳಿಸಿರುವನು. ಈ ಸಂದೇಶವಾಹಕರನ್ನು ಪುರಾತನ ಭಾರತದಲ್ಲಿ ಮಹಾಋಷಿಗಳು ಮತ್ತು ಪ್ರವಾದಿಗಳು ಎನ್ನಲಾಗುತ್ತಿತ್ತು. ಆ ಸಂದೇಶವಾಹಕರ ಸರಣಿಯಲ್ಲಿ ಅಂತಿಮವಾಗಿ ಬಂದಿರುವವರು ಮುಹಮ್ಮದ್(ಸ)ರವರು. ಅವರು ಸುಮಾರು 1435 ವರ್ಷಗಳ ಹಿಂದೆ ಅರೇಬಿಯಾದ ಮರಳುಗಾಡಿನಲ್ಲಿ

ಜನಿಸಿದರು, ಅನಕ್ಷರಸ್ಥರಾಗಿದ್ದ ಅವರ ಮೇಲೆ ಅಲ್ಲಾಹನ ವಾಣಿ ಅವತೀರ್ಣಗೊಂಡಿತು.

ಆ ಸೃಷ್ಟಿಕರ್ತನ ಸಂದೇಶವೇ ಖುರ್‌ಆನ್ ಆಗಿದ್ದು 1435 ವರ್ಷಗಳ ದೀರ್ಘಾವಧಿಯಲ್ಲಿ ಇದು ಸೃಷ್ಟಿಕರ್ತನಿಂದಲೇ ಸಂರಕ್ಷಿಸಲ್ಪಟ್ಟಿದೆ. ಆ ಸೃಷ್ಟಿಕರ್ತನು ಹೇಳುತ್ತಾನೆ, **" ಈ ಉಪದೇಶವನ್ನು ನಿಶ್ಚಯವಾಗಿ ನಾವು ಅವತೀರ್ಣ ಗೊಳಿಸಿರುತ್ತೇವೆ, ಮತ್ತು ನಾವೇ ಅದರ ಸಂರಕ್ಷಕರಾಗಿರುತ್ತೇವೆ."** (ಖುರ್‌ಆನ್ 15:9)

ಈ ಖುರ್‌ಆನ್ ಸಕಲ ಮಾನವ ಕುಲಕ್ಕೆಂದು ಸರ್ವಶಕ್ತನಾದ ಸೃಷ್ಟಿಕರ್ತನ ಕಡೆಯಿಂದ ಅವತೀರ್ಣಗೊಂಡ ಅಂತಿಮ ಸಂದೇಶವಾಗಿದೆ. ಅರಬಿ ಭಾಷೆಯಲ್ಲಿ ಸೃಷ್ಟಿಕರ್ತನಿಗೆ **"ಅಲ್ಲಾಹ್"** ಎನ್ನುತ್ತಾರೆ, ಬನ್ನಿ ಈ ವಿಶ್ವವನ್ನು ಸೃಷ್ಟಿಸಿ ಅದನ್ನು ಪರಿಪಾಲಿಸುತ್ತಿರುವವನ ಸಂದೇಶದ ಮೂಲಕ ನಮ್ಮ ಜೀವನದ ಉದ್ದೇಶವನ್ನು ಮರಣದ ನಂತರ ಏನಾಗುವುದೆಂಬುದನ್ನು ಅರಿಯೋಣ.

ನಮ್ಮ ಅಸ್ತಿತ್ವದ ಉದ್ದೇಶ :

ಖುರ್‌ಆನ್‌ನಿನಲ್ಲಿ ಸೃಷ್ಟಿಕರ್ತನು ನಮ್ಮ ಅಸ್ತಿತ್ವದ ಉದ್ದೇಶವನ್ನು ಸ್ಪಷ್ಟವಾಗಿ ಹೇಳಿದ್ದಾನೆ. **" ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವರೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಇರಿಸಿರುವನು"** (ಖುರ್‌ಆನ್ 67:2)

ಹೌದು ಸಹೋದರ ಸೋದರಿಯರೇ ಈ ಜೀವನವು

ಒಂದು ಪರೀಕ್ಷೆಯಾಗಿದೆ! ಮನುಷ್ಯನು ಒಳಿತಿನ ಕಾರ್ಯಗಳನ್ನು ಎಸಗುತ್ತಾನೋ ಅಥವ ಕೆಡುಕಿನ ಕಾರ್ಯಗಳನ್ನೋ, ಸತ್ಯ ಮಾರ್ಗವನ್ನು ಅನುಸರಿಸುವನೋ ಅಥವ ಮಿತ್ಯವನ್ನೋ ಎಂಬುದನ್ನು ನೋಡಲಿಕ್ಕಾಗಿ ಅವನನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ನಮ್ಮ ಅಸ್ತಿತ್ವದ ಉದ್ದೇಶ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಾಗಿದೆ.

ನಿರ್ಣಯಕ ದಿನ:

ಒಂದು ಪ್ರಶ್ನೆ – ಈ ಪರೀಕ್ಷೆಯ ಫಲಿತಾಂಶವು ಯಾವಾಗ ಪ್ರಕಟಿತವಾಗುವುದು?

ಅಲ್ಲಾಹನು ಹೇಳುತ್ತಾನೆ: **"ಪ್ರತಿಯೊಂದು ಜೀವಿಗೂ ಮರಣದ ರುಚಿಯನ್ನು ಸವಿಯಬೇಕಾಗಿದೆ, ಮತ್ತು ನೀವೆಲ್ಲರೂ ನಿಮ್ಮ ಪ್ರತಿಫಲವನ್ನು ಪುನರುತ್ಥಾನದಿನದಂದು ಪಡೆಯುವವರಿದ್ದೀರಿ. ಅಲ್ಲಿ ಯಾರಾ ನರಕಾಗ್ನಿಯಿಂದ ರಕ್ಷಣೆ ಹೊಂದಿ ಸ್ವರ್ಗದಲ್ಲಿ ಪ್ರವೇಶಿಸಲ್ಪಡುವರೋ ಅವರೇ ನಿಜವಾದ ಜಯಶಾಲಿಯಾದರು. ಈ ಲೋಕದ ಜೀವನವಂತೂ ಕೇವಲ ಭ್ರಮೆಭರಿತ ಸಂಪತ್ತಾಗಿದೆ"** (ಖುರ್‌ಆನ್ ೩:೧೮೫)

ಇಹಲೋಕದ ಜೀವನದ ನಂತರ ಪರಲೋಕದ ಜೀವನವಿದೆ. ಈ ಲೋಕದ ಪ್ರತಿಯೊಬ್ಬ ಮನುಷ್ಯನನ್ನೂ ಪುನಃ ಜೀವಂತಗೊಳಿಸಿ, ವಿಚಾರಣೆಗೆ ಒಳಪಡಿಲಾಗುವುದು. ಆ ದಿನ ಯಾರಿಗೂ ತಪ್ಪಿಸಿಕೊಳ್ಳಲು ಸಾಧ್ಯವಾಗಲಾರದು, ಅಲ್ಲಾಹನು ಹಾಳುತ್ತಾನೆ: **" ನಿಸ್ಸಂದೇಹವಾಗಿಯೂ ತೀರ್ಮಾನದ ದಿನವು ಒಂದು ನಿಶ್ಚಿತ ಸಮಯವಾಗಿದೆ ಕಹಳೆ ಮೋಳಗಿದಂದು ನೀವು ತಂಡೋಪ

ತಂಡಗಳಾಗಿ ಹೊರಟು ಬರುವಿರಿ" (ಖುರ್‌ಆನ್ 78: 17,19)

ಅಂದು ನಾವು ನಮ್ಮನ್ನು ಮತ್ತೊಮ್ಮೆ ಜೀವಂತಗೊಳಿಸಲಾಗಿದೆ ಎಂದು ಖಚಿತವಾಗಿ ಅರಿತುಕೊಳ್ಳುವೆವು. ಆದರೆ ಅಂದು ನಮ್ಮ ರಕ್ಷಣೆಗಾಗಿ ಏನನ್ನೂ ಮಾಡಲಿಕ್ಕೆ ಸಾಧ್ಯವಾಗಲಾರದು. ಕೇವಲ ನಾವು ಇಹಲೋಕದಲ್ಲಿ ಮಾಡಿದ ಕರ್ಮಗಳ ಫಲಿತಾಂಶಗಳನ್ನು ಕಾಣುವೆವು. ಆ ದಿನ ನಮ್ಮ ಸಂಪತ್ತು ತಂದೆ–ತಾಯಿ, ಮಡದಿ–ಮಕ್ಕಳು, ಬಂಧು–ಬಳಗ, ಮಿತ್ರರು ಯಾರೂ ಜೊತೆಗಿರುವುದಿಲ್ಲ. ಹುಟ್ಟಿದಾಗ ನಗ್ನರಾಗಿ ಒಬ್ಬಂಟಿಗರಾಗಿರುವಂತೆ, ಆ ದಿನ ಅಲ್ಲಿ ನಾವು ನಮ್ಮ ಪ್ರಭುವನ್ನು ಒಬ್ಬೊಬ್ಬರಾಗಿ ಭೇಟಿಯಾಗಲಿರುವೆವು. ಆ ದಿನ ನಮ್ಮ ಜೊತೆ ನಮ್ಮ ಕರ್ಮಗಳ ಹೊರತು ಬೇರೇನೂ ಇರುವುದಿಲ್ಲ.

ಪುನಃ ಜೀವಂತಗೊಳಿಸುವುದು ಸಾಧ್ಯವೇ?

"ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನ್ನು ಅದರಂತಹವನ್ನು ಸೃಷಿಸಲು ಸಾಮರ್ಥ್ಯವುಳ್ಳವನಲ್ಲವೇ? ಅವನೇ ಮಹಾ ಸೃಷ್ಟಿಕರ್ತನು ಮಹಾ ಜ್ಞಾನಿಯೂ ಆಗಿರುವನು. ಅವನು ಯಾವುದಾದರೂ ವಸ್ತುವನ್ನು ಬಯಸಿದರೆ ಅದಕ್ಕೆ ಆಗು ಎಂದು ಹೇಳುತ್ತಾನೆ, ಅದು ಆಗಿಬಿಡುತ್ತದೆ." (ಖುರ್‌ಆನ್ 36: 81,82)

ಖುರ್‌ಆನ್ ಹೇಳುತ್ತದೆ; **"ಸೃಷ್ಟಿಯ ಆರಂಭ ಮಾಡುವವನೂ ಅವನೇ ಮತ್ತು ಅದರ ಪುನರಾವರ್ತನೆ ಮಾಡುವವನೂ ಅವನೇ. ಇದು ಅವನಿಗೆ ಅತ್ಯಂತ ಸುಲಭವಾದದ್ದು"** (ಖುರ್‌ಆನ್ 30:27)

ಅಂತಿಮ ತೀರ್ಪು:

ಖುರ್‌ಆನ್ ಹೇಳುತ್ತದೆ; **"ಅಣು ಗಾತ್ರದಷ್ಟು ಪುಣ್ಯ ಕಾರ್ಯವೆಸಗಿದವನು ಅದನ್ನು ಕಂಡೇ ತೀರುವನು, ಅಣು ಗಾತ್ರದಷ್ಟು ಪಾಪ ಮಾಡಿದವನು ಅದನ್ನು ಕಂಡೇ ತೀರುವನು"** (ಖುರ್‌ಆನ್ ೯೯:7,8) ಆ ದಿನ ನಾವು ಮಾಡಿರುವ ಕಾರ್ಯಗಳ ದಾಖಲೆಯನ್ನು ನಮ್ಮ ಮುಂದೆ ಪ್ರಸ್ತುತ ಪಡಿಸಲಾಗುವುದು, ಯಾರ ಮೇಲಾದರೂ ಅನ್ಯಾಯವೆಸಗಲಾಗಿದ್ದರೆ ಅಂದು ನ್ಯಾಯವನ್ನು ದೊರಕಿಸಿಕೊಡಲಾಗುವುದು.

ಆ ದಿನದ ಕುರಿತು ಖುರ್‌ಆನ್ ಹೇಳುತ್ತದೆ :

"ಇವರ ಬಾಯಿಗಳಿಗೆ ಮುದ್ರೆಯನ್ನೊತ್ತಿ ಬಿಡುವೆವು. ಇವರು ಭೂಲೋಕದಲ್ಲಿ ಏನು ಸಂಪಾದಿಸುತ್ತಿದ್ದರೆಂದು ಇವರ ಕೈಗಳು ನುಡಿಯುವುವು ಮತ್ತು ಇವರ ಕಾಲುಗಳು ಸಾಕ್ಷ್ಯ ಹೇಳುವುವು" (ಖುರ್‌ಆನ್ : ೩೬:೬೫)

ತೀರ್ಪಿನ ನಂತರ ನಮ್ಮ ಕರ್ಮಗಳ ಅನುಗುಣವಾಗಿ ನಮಗೆ ಶಾಶ್ವತವಾದ ಸ್ಥಾನ (ಸ್ವರ್ಗ ಅಥವ ನರಕ) ನೀಡಲಾಗುವುದು. ಖುರ್‌ಆನ್ ಹೇಳುತ್ತದೆ: **" ತರುವಾಯ ಯಾರ (ಪುಣ್ಯ ಕರ್ಮಗಳ) ತೂಕವು ಭಾರವಾಗಿರುವುದೊ ಅವನು ಮನೋಹರವಾದ ಸುಖಭೋಗದಲ್ಲಿರುವನು (ಸ್ವರ್ಗದಲ್ಲಿ) ಮತ್ತು ಯಾರ (ಪುಣ್ಯ ಕರ್ಮಗಳ) ತೂಕವು ಹಗುರವಾಗಿರುವುದೊ ಅವರ ನಿವಾಸವು ಆಳವಾದ (ನರಕಾಗ್ನಿಯು) ಹೊಂಡವಾಗಿರುವುದು."** (ಖುರ್‌ಆನ್ 101:6–9)

ಸಹೋದರ ಸಹೋದರಿಯರೆ ಈ ಘಟನೆಗಳು ಖಂಡಿತ ಜರುಗಲಿವೆ. ಖುರ್‌ಆನ್ ಹೇಳುತ್ತದೆ;

“ಖಂಡಿತವಾಗಿಯೂ ಪುನರುತ್ಥಾನದ ಘಳಿಗೆ ಬರಲಿದೆ, ಅದು ಬರುವುದರಲ್ಲಿ ಯಾವುದೇ ಸಂದೇಹವಿಲ್ಲ” (ಖುರ್‌ಆನ್ 40:59)

ಸೃಷ್ಟಿಕರ್ತನಿಂದ ನಾವು ಪುನಃ ಜೀವಂತಗೊಳಿಸಲ್ಪಟ್ಟಿದ್ದೇವೆ ಎಂಬ ಅರಿವು ಎಲ್ಲರಿಗೂ ಉಂಟಾಗುತ್ತದೆ. ಅಂದು ಇದನ್ನೇಲ್ಲಾ ನಿರಾಕರಿಸುತ್ತಿದ್ದವನು ಬಹಳ ಪಶ್ಚಾತಾಪ ಪಡುವನು. ಖುರ್‌ಆನ್ ಹೇಳುತ್ತದೆ; **“ಆ ದಿನ ಅಕ್ರಮಿಯು ತನ್ನ ಕೈಗಳನ್ನು ಕಚ್ಚಿಕೊಂಡು ಅಯ್ಯೋ ನಾನು ಸಂದೇಶವಾಹಕರ ಮಾರ್ಗವನ್ನು ಹಿಡಿದಿದ್ದರೆ”** ಎಂದು ಹೇಳುವನು **(ಖುರ್‌ಆನ್ 25:27)**

ಖುರ್‌ಆನ್ ಹೇಳುತ್ತದೆ “ಆ ಪ್ರಳಯ ಬಂದೆರುಗುವ ದಿನ ಅಪರಾಧಿಗಳು ಮೂಕ ವಿಸ್ಮಿತರಾಗಿಬಿಡುವರು.” (ಖುರ್‌ಆನ್ 30:12)

ಒಳಿತಿನ ಕಾರ್ಯಗಳನ್ನು ಮಾಡುತ್ತಿದ್ದವರು ತಮ್ಮ ಕಾರ್ಯಗಳ ಪ್ರತಿಫಲವನ್ನು ಕಾಣುವರು.

ಸ್ವರ್ಗ ಮತ್ತು ನರಕದಲ್ಲಿ ಏನಿದೆ?

ಸೃಷ್ಟಿಕರ್ತನ ಅಂತಿಮ ಗ್ರಂಥವಾದ ಖುರ್‌ಆನ್ ಸ್ವರ್ಗ ಮತ್ತು ನರಕದ ಬಗ್ಗೆ ಪದೇ ಪದೇ ನೆನಪಿಸುತ್ತದೆ. ಖುರ್‌ಆನ್ ಹೇಳುತ್ತದೆ; **“ಮುಂದೆ ಅವರ ಕರ್ಮಗಳಿಗೆ ಪ್ರತಿಫಲವಾಗಿ ಅವರ ಕಣ್ಮನಗಳನ್ನು ತಣಿಸುವಂತಹಾ ಯಾವ ಸತ್ಫಲಗಳನ್ನು ಅವರಿಗಾಗಿ ಬಚ್ಚಿಡಲಾಗಿದೆಯೋ ಅದರ ಅರಿವು ಯಾವ ಜೀವಿಗೂ ಇಲ್ಲ”(ಖುರ್‌ಆನ್ 32:17,18) “ಸತ್ಯ ವಿಶ್ವಾಸ ಸ್ವೀಕರಿಸಿದರೂ ಸತ್ಕರ್ಮ ಮಾಡಿದವರೂ ಅತ್ಯುತ್ತಮ ಸೃಷ್ಟಿಗಳು, ಅವರ ಪ್ರತಿಫಲ ಅವರ ಪ್ರಭುವಿನ ಬಳಿ ಶಾಶ್ವತ ನಿವಾಸವಾದ ಸ್ವರ್ಗೋದ್ಯಾನಗಳಾಗಿವೆ. ಅವುಗಳ ತಳಭಾದಲ್ಲಿ ಕಾಲುವೆಗಳು**

ಹರಿಯುತ್ತಿರುವುವು. ಅವರು ಅವುಗಳಲ್ಲಿ ಸದಾಕಾಲ ವಾಸಿಸುವರು, ಅಲ್ಲಾಹ್ ಅವರಿಂದ ಸಂತುಷ್ಟನಾದನು ಮತ್ತು ಅವರು ಅಲ್ಲಾಹ್‌ನಿಂದ ಸಂತುಷ್ಟರಾದರು. ಇವೆಲ್ಲವು ತನ್ನ ಪ್ರಭುವಿನ ಬಗ್ಗೆ ಭಯಪಟ್ಟವನಿಗಾಗಿದೆ."(ಖುರ್‌ಆನ್ 98: 7,8)

"ಅತ್ಯುನ್ನತ ಸ್ವರ್ಗೋದ್ಯಾನದಲ್ಲಿ ಅದರ ಫಲದ ಗೊಂಚಲುಗಳು ಬಾಗಿಕೊಂಡಿರುವುವು, (ಇಂತಹವರೊಡನೆ) ನೀವು ಗತಿಸಿ ಹೋದ ದಿನಗಳಲ್ಲಿ ಮಾಡಿರುವ ಸತ್ಕರ್ಮಗಳ ಪ್ರತಿಫಲವಾಗಿ ಸಂತೋಷದಿಂದ ತಿನ್ನಿರಿ ಮತ್ತು ಕುಡಿಯಿರಿ ಎಂದು ಹೇಳಲಾಗುವುದು," (ಖುರ್‌ಆನ್ 69: 22–24)

ಸ್ವರ್ಗದ ಜೀವನವು ಶಾಶ್ವತವಾಗಿರುವುದು. ಅಲ್ಲಿ ಮರಣ ಮತ್ತು ರೋಗ ಬಾದಿಸದು. ಅವರಿಗೆ ಪರಿಶುದ್ಧ ಮಡದಿಗಳನ್ನು ಕೊಡಲಾಗುವುದು. ಮನಸ್ಸು ಇಚ್ಛಿಸುವ ಎಲ್ಲಾ ವಸ್ತುಗಳು ದೊರಕುವುದು. ಸುಖವು ಅದರ ಪರಿಪೂರ್ಣ ರೂಪದಲ್ಲಿರುವುದು. ಇದೇ ಸಂದರ್ಭದಲ್ಲಿ ಖುರ್‌ಆನ್ ನರಕದ ಬಗ್ಗೆ ಎಚ್ಚರಿಕೆಯನ್ನು ನೀಡುತ್ತಿದೆ. ಯಾರು ಈ ಪರೀಕ್ಷೆಯಲ್ಲಿ ವಿಫಲರಾಗುತ್ತಾರೊ ಅವರು ಶಾಶ್ವತವಾಗಿ ನರಕದಲ್ಲಿ ಎಸೆಯಲ್ಪಡುತ್ತಾರೆ. ಖುರ್‌ಆನ್ ಹೇಳುತ್ತದೆ; "ನಮ್ಮ ನಿದರ್ಶನಗಳನ್ನು ನಿರಾಕರಿಸಿದವರನ್ನು ನಾವು ನಿಶ್ಚಯವಾಗಿಯೂ ನರಕಾಗ್ನಿಗೆ ತಳ್ಳಿಬಿಡುವೆವು. ಅವರ ಮೈ ಚರ್ಮ ಸುಟ್ಟು ಹೋದಾಗಲೆಲ್ಲಾ ಅವರು ಶಿಕ್ಷೆಯನ್ನು ಚೆನ್ನಾಗಿ ಸವಿಯುವಂತಾಗಲು ನಾವು ಅದರ ಸ್ಥಾನದಲ್ಲಿ ಬೇರೆ ಚರ್ಮವನ್ನು ಸೃಷ್ಟಿಸುತ್ತಾ ಹೋಗುವೆವು."(ಖುರ್‌ಆನ್,4:56) "ವಾಸ್ತವದಲ್ಲಿ ನರಕವು ಒಂದು ಹೊಂಚಾಗಿದೆ. ಅದು ಪಾಪಿಗಳ ವಾಸಸ್ಥಾನವಾಗಿದೆ. ಅದರಲ್ಲಿ ಅವರು ದೀರ್ಘಕಾಲ ಬಿದ್ದುಕೊಂಡಿರುವರು. ಅದರೊಳಗೆ ಅವರು ಯಾವುದೇ

ತಂಪನ್ನಾಗಿ, ಕುಡಿಯಲು ಅರ್ಹವಾದ ಯಾವುದೇ ವಸ್ತುವಿನ ರುಚಿಯನ್ನಾಗಿ ಸವಿಯಲಾರರು. ಏನಾದರೂ ಸಿಗುವುದಿದ್ದರೆ ಅದು ಕುದಿಯುವ ನೀರು ಮತ್ತು ಹುಣ್ಣುಗಳ ಕೀವು ಮಾತ್ರ." (ಕುರ್‌ಆನ್,78:21,26)

ಇದೇ ರೀತಿಯ ಎಚ್ಚರಿಕೆಗಳು ಖುರ್‌ಆನಿನಲ್ಲಿ ಅನೇಕ ಅಧ್ಯಾಯಗಳಲ್ಲಿ ಹಾಗೂ ಸಂದೇಶವಾಕ ಮುಹಮ್ಮದ್(ಸ)ರವರ ವಚನಗಳಲ್ಲಿ ಸ್ಪಷ್ಟವಾಗಿ ಸಿಗುತ್ತವೆ.

ವಾಸ್ತವಿಕ ಅಂಶ;

ಆತ್ಮೀಯ ಸಹೋದರ ಸಹೋದರಿಯರೆ, ನಿರ್ಣಾಯಕ ದಿನ ಸ್ವರ್ಗ ಮತ್ತು ನರಕ, ಇವೆಲ್ಲಾ ಊಹೆ ಅಥವ ಕಟ್ಟು ಕಥೆಗಳಲ್ಲ. ನಮ್ಮ ಇಹ ಜೀವನದಂತೆ ಅವು ಸಹ ನೈಜವಾಗಿವೆ. ಮರಣ ನಂತರ ಜೀವನದ ಶಿಕ್ಷೆ ಮತ್ತು ಪುರಸ್ಕಾರವನ್ನು ನಾವು ಭೌತಿಕ ಶರೀರದೊಂದಿಗೆ ಅನುಭವಿಸುತ್ತೇವೆ. ಈ ಜೀವನದಲ್ಲಿ ನಾವು ದೇಹದ ಬಗ್ಗೆ ಬಹಳಷ್ಟು ಕಾಳಜಿವಸುತ್ತೆವೆ. ಒಳಿತಿನ ಕಾರ್ಯಗಳನ್ನು ಮಾಡುವ ಮೂಲಕ ನಾವೇಕೆ ಶಾಶ್ವತ ಜೀವನದ ಬಗ್ಗೆ ಕಾಳಜಿ ವಹಿಸಬಾರದು?

ದೃಷ್ಟಾಂತಗಳನ್ನು ಅವಲೋಕಿಸಿ:

ಇಂದು ನಾವು ಸೃಷ್ಟಿಕರ್ತನನ್ನು ಸ್ವರ್ಗವನ್ನು ಕಣ್ಣಾರೆ ಕಾಣಲು ಸಾಧ್ಯವಿಲ್ಲ ಆದರೆ ಇದುವೇ ನಮ್ಮ ಪರೀಕ್ಷೆಯಾಗಿದೆ. ಒಂದು ದಿನ ಎಲ್ಲಾ ಮನುಷ್ಯರು ಇವೆಲ್ಲವನ್ನು ಪ್ರತ್ಯಕ್ಷವಾಗಿ ಕಾಣುವರು. ಆಗ ಯಾರೂ ಅಲ್ಲಗಳೆಯಲಾರರು. ಆದರೆ ಆಗಿನ ವಿಶ್ವಾಸ ಯಾವ ಪ್ರಯೋಜನಕ್ಕೂ ಬರಲಾರದು. ಏಕೆಂದರೆ ಆಗ

ಪರೀಕ್ಷೆಯ ಸಮಯ ಮುಕ್ತಾಗೊಂಡಿರುವುದು. ಕಣ್ಣಿಗೆ ಕಾಣದವುಗಳಲ್ಲಿ ವಿಶ್ವಾಸವಿಡುವುದೇ ಪರೀಕ್ಷೆಯಾಗಿದೆ. ಜಗತ್ತಿನಲ್ಲಿ ನಮ್ಮ ಕಣ್ಣಿನ ಸುತ್ತಮುತ್ತ ನಮ್ಮ ಮಾರ್ಗದರ್ಶಕ್ಕಾಗಿ ಅನೇಕ ದೃಷ್ಟಾಂತಗಳಿವೆ 100 ವರ್ಷಗಳ ಹಿಂದೆ ನಾವೇನಾಗಿದ್ದೆವು? ಏನೂ ಇಲ್ಲ. ಆದರೆ ಇಂದು ನಾವು ಜೀವಂತವಾಗಿದ್ದು ಚಟುವಟಿಕೆಯಿಂದ ಕೂಡಿದ್ದೇವೆ. ಇದನ್ನು ಮಾಡಿದವರ್ಯಾರು? ಖಂಡಿತವಾಗಿ ನಮ್ಮ ಸೃಷ್ಟಿಕರ್ತನೇ ಆಗಿದ್ದಾನೆ.

ಅಲ್ಲಾಹನು ಹೇಳುತ್ತಾನೆ; "ನಾವು ಮಾನವನನ್ನು ವೀರ್ಯಾಣುವಿನಿಂದ ಸೃಷ್ಟಿಸಿರುವುದನ್ನು ಅವನು ನೋಡುವುದಿಲ್ಲವೇ? ಮತ್ತೆ ಅವನು ಸ್ಪಷ್ಟ ಜಗಳಗಂಟನಾಗಿ ನಿಂತು ಬಿಟ್ಟನು. ಈಗ ಅವನು ನಮಗೆ ಹೋಲಿಕೆ ಕೊಡುತ್ತಾನೆ ಮತ್ತು ತನ್ನ ಸೃಷ್ಟಿಯನ್ನು ಮರೆತು ಬಿಡುತ್ತಾನೆ. ಈ ಎಲುಬುಗಳು ಶಿಥಿಲವಾಗಿ ಹೋದ ಬಳಿಕ ಇವುಗಳನ್ನು ಜೀವಂತಗೊಳಿಸುವವನಾರು? ಎಂದು ಕೇಳುತ್ತಾನೆ. (ಇವರಿಗೆ) ಹೇಳಿರಿ ಇವುಗಳನ್ನು ಪ್ರಥಮ ಬಾರಿಗೆ ಸೃಷ್ಟಿಸಿದವನೇ ಪುನಃ ಜೀವಂತಗೊಳಿಸುವನು. ಅವನು ಸೃಷ್ಟಿಯ ಪ್ರತಿಯೊಂದರ ಬಗೆಗೂ ಬಲ್ಲವನು" (ಖುರ್‌ಆನ್ 36:77,78,79)

ನಾವು ಈ ಪರೀಕ್ಷೆಯಲ್ಲಿ ಯಶಸ್ಸುಗಳಿಸುವುದು ಹೇಗೆ?

ನಾವು ಸೃಷ್ಟಿಕರ್ತನಿಗೆ ವಿಧೇಯರಾಗಿ ಬಾಳಬೇಕು. ಅರಬಿ ಭಾಷೆಯಲ್ಲಿ ಇದನ್ನು **ಇಸ್ಲಾಮ್** ಎನ್ನುತ್ತಾರೆ. ಪ್ರಥಮವಾಗಿ ಸೃಷ್ಟಿಕರ್ತನನ್ನು ನಮ್ಮ ಒಡೆಯನೆಂದು ನಾವು ಅಂಗೀಕರಿಸಬೇಕು. ಆತನಿಂದ ಕಳುಹಿಸಲ್ಪಟ್ಟಿರುವ ಎಲ್ಲಾ

ಸಂದೇಶವಾಹಕರನ್ನು ಮತ್ತು ದೈವೀಕ ಗ್ರಂಥಗಳನ್ನು ನಾವು ಒಪ್ಪಿಕೊಳ್ಳಬೇಕು. ಆತನ ಆಜ್ಞಾಪಾಲಕರಾಗಬೇಕು, ಇದನ್ನು ಪುಣ್ಯ ಕಾರ್ಯ ಎನ್ನುತ್ತಾರೆ. ಆತನು ನಿಷೇಧಿಸಿರುವ ಪಾಪ ಕಾರ್ಯಗಳಿಂದ ನಾವು ದೂರವಿಬೇಕು. ತನ್ನ ಇಷ್ಟದಂತೆ ಅಥವ ತನ್ನ ಸಮುದಾಯದ ಇಚ್ಛೆಯಂತೆ ಮನುಷ್ಯನು ಯಾವುದು ಒಳಿತು ಯಾವುದು ಕೆಡುಕು ಎಂದು ನಿರ್ಧರಿಸುವಂತಿಲ್ಲ. ನಾವು ಅಂತಿಮವಾಗಿ ಸೃಷ್ಟಿಕರ್ತನ ಬಳಿಗೇ ಮರಳಬೇಕಾಗಿರುವುದರಿಂದ ಈ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಆತನ ಮಾರ್ಗದರ್ಶನದ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾಗಬೇಕಾಗಿದೆ. ಅಲ್ಲಾಹನು ಹೇಳುವನು **"ನೇರಮಾರ್ಗವನ್ನು ತೋರಿಸುವ ಹೊಣೆ ನಮ್ಮ ಮೇಲೆಯೇ ಇದೆ"** (ಖುರ್‌ಆನ್ 16:9) **"ಖಂಡಿತವಾಗಿಯೂ ದಾರಿತೋರಿಸುವ ಹೊಣೆ ನಮ್ಮ ಮೇಅದೆ ಮತ್ತು ವಾಸ್ತವದಲ್ಲಿ ಪರಲೋಕ ಮತ್ತು ಇಹಲೋಕ ಇವೆರಡಕ್ಕೂ ನಾವೇ ಒಡೆಯರು."** (ಖುರ್‌ಆನ್ 92:12,13)

ಸೃಷ್ಟಿಕರ್ತನ ನೈಜ ಮಾರ್ಗದರ್ಶನ ಎಲ್ಲಿ ದೊರಕುವುದು?

ಸೃಷ್ಟಿಕರ್ತನು ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ತನ್ನ ಸಂದೇಶವಾಹಕರನ್ನು ದಿವ್ಯ ಸಂದೇಶದೊಂದಿಗೆ ಕಳುಹಿಸಿದ್ದಾನೆಂಬುದು ನಿಜ. ಆ ಕಾಲದಲ್ಲಿ ದಿವ್ಯ ಸಂದೇಶವು ತನ್ನ ಮೂಲಕ ತನ್ನ ಮೂಲ ಸ್ವರೂಪದಲ್ಲಿಯೇ ಇತ್ತು. ಆದರೆ ನಂತರದ ತಲೆಮಾರಿನ ಜನರು ಅಜ್ಞಾನದಿಂದಾಗಿ ಅಥವ ಜನರನ್ನು ಶೋಷಿಸುವುದಕ್ಕಾಗಿ ಇದರಲ್ಲಿ ಬದಲಾವಣೆಗಳನ್ನು

ಮಾಡಿದರು. ಇಂದು ಸೃಷ್ಟಿಕರ್ತನ ಹೊಸ ದಿವ್ಯ ಸಂದೇಶವನ್ನು ಪವಿತ್ರ ಖುರ್‌ಆನ್ ರೂಪದಲ್ಲಿ ಮತ್ತು ಸಂದೇಶವಾಹಕ ಮುಹಮ್ಮದ್(ಸ)ರವರ ಬೋಧನೆಗಳಲ್ಲಿ ಸುರಕ್ಷಿತವಾಗಿ ಕಾಣಬಹುದು. ಖುರ್‌ಆನ್ ಬಗ್ಗೆ ಸೃಷ್ಟಿಕರ್ತನು ಈ ರೀತಿಯಲ್ಲಿ ಹೇಳುತ್ತಾನೆ. **"ಇದು (ದೈವೀಕ)ಗ್ರಂಥ ಸಂದೇಹಾತೀತವಿದು. ಭಯಭಕ್ತಿಯುಳ್ಳವರಿಗೆ ಮಾರ್ಗದರ್ಶಿ"** (ಖುರ್‌ಆನ್, 2:2)

ಖುರ್‌ಆನಿನ ಮೇಲೆ ವಿಶ್ವಾಸವಿಡದವರಿಗೆ ಖುರ್‌ಆನ್ ಪಂಥಾಹ್ವಾನ ನೀಡುತಿದ್ದು ಅವರಿಗೆ ಎಚ್ಚರಿಕೆಯನ್ನೂ ನೀಡುತ್ತದೆ. ಅಲ್ಲಾಹನು ಹೇಳುತ್ತಾನೆ.

"ನಾವು ನಮ್ಮ ದಾಸನಿಗೆ ಅವತೀರ್ಣಗೊಳಿಸಿದ ಈ ಗ್ರಂಥವು ನಮ್ಮದೋ ಅಥವ ಅಲ್ಲವೋ ಎಂಬ ವಿಷಯದಲ್ಲಿ ನಿಮಗೆ ಸಂದೇಹವಿದ್ದರೆ ಇದಕ್ಕೆ ಸರಿಸಮಾನವಾದ ಒಂದು ಅಧ್ಯಾಯವನ್ನಾದರೂ ರಚಿಸಿ ತನ್ನಿರಿ. ನೀವು ಸತ್ಯವಾದಿಗಳಾಗಿದ್ದಲ್ಲಿ. ಅಲ್ಲಾಹನ ಹೊರತು ನಿಮ್ಮೆಲ್ಲಾ ಸಾಕ್ಷಿಗಳನ್ನು ನಿಮ್ಮ ಸಹಾಯಕ್ಕಾಗಿ ಕರೆದುಕೊಳ್ಳಿರಿ. ಆದರೆ ನಿಮ್ಮಿಂದ ಸಾಧ್ಯವಾಗದಿದ್ದಲ್ಲಿ ಹಾಗೂ ನಿಮ್ಮಿಂದ ಎಂದಿಗೂ ಸಾಧ್ಯವಾಗದು, ಮನುಷ್ಯರನ್ನು ಹಾಗೂ ಶಿಲೆಗಳನ್ನು ಇಂಧನವಾಗಿ ಸಿದ್ಧಗೊಳಿಸಲಾಗಿರುವ ಆ ನರಕದಿಂದ ಅಂಜಿರಿ" (ಖುರ್‌ಆನ್, 2:23,24)

ಸೃಷ್ಟಿಕರ್ತನು ಅಧಿಕಾರಯುಕ್ತವಾಗಿ ತನ್ನ ದಿವ್ಯ ಗ್ರಂಥಗಳಲ್ಲಿ ಈ ರೀತಿ ಘೋಷಿಸುತ್ತಾನೆ.

"ಅಲ್ಲಾನ ಬಳಿ (ಸಮ್ಮತಿಗೆ ಅರ್ಹ) ಧರ್ಮವು ಇಸ್ಲಾಮ್ ಮಾತ್ರವಾಗಿದೆ" (ಖುರ್‌ಆನ್ 3:19)

ಅಂದರೆ ಸಂದೇಶವಾಹಕರು ತೋರಿಸುವ ಮಾರ್ಗದರ್ಶನವೇ ಸೃಷ್ಟಿಕರ್ತನಿಗೆ ಸ್ವೀಕಾರ ಅರ್ಹವಾಗಿರುವುದು. ಸೃಷ್ಟಿಕರ್ತನು ಈ ಎಚ್ಚರಿಕೆಯನ್ನು ನೀಡಿದ್ದಾನೆ. **"ಅವರು ಅಲ್ಲಾಹನ ಧರ್ಮವನ್ನು ಬಿಟ್ಟು ಬೇರೆ ಯಾವುದನ್ನಾದರೂ ಬಯಸುತ್ತಿರುವರೇ, ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳು ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕರಾಗಿಯೇ (ಮುಸ್ಲಿಮ್‌ಗಳಾಗಿ) ಇವೆ. ಮತ್ತು ಸರ್ವರೂ ಅವನ ಕಡೆಗೆ ಮರಳಲಿಕ್ಕಿದೆ"** (ಖುರ್‌ಆನ್ ೩:೮೩) **"ಯಾರಾದರೂ ಇಸ್ಲಾಮ್ ಹೊರತು ಯಾವುದಾದರೂ ಇತರೆ ಧರ್ಮವನ್ನು ಸ್ವೀಕರಿಸಿದರೆ ಅವನ ಆ ಧರ್ಮವನ್ನು ಎಂದಿಗೂ ಮಾನ್ಯಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿಬಿಡುವನು"** (ಖುರ್‌ಆನ್,೩:೮೫)

ಆತ್ಮೀಯ ಸಹೋದರ ಸಹೋದರಿಯರೆ, ಈ ದೈವ ವಚನಗಳ ಮೂಲಕ ನಮ್ಮ ಸೃಷ್ಟಿಕರ್ತ ಮತ್ತು ಒಡೆಯನು ಆತನಿಗೆ ಅವಿಧೇತೆ ತೋರುವವರಿಗೆ, ಅವರ ಕರ್ಮಗಳ ಅನುಸಾರವಾಗಿ ಶಿಕ್ಷೆ ನೀಡುವುದಾಗಿ ಎಚ್ಚರಿಸುತ್ತಿದ್ದಾನೆ. ಗರಿಷ್ಟ ಮಟ್ಟದ ಅವಿಧೇಯತೆಯು ಸೃಷ್ಟಿಕರ್ತನ ಆರಾಧನೆಯಲ್ಲಿ ಆತನೊಂದಿಗೆ ಇತರರನ್ನು ಪಾಲುಗೊಳಿಸುವುದಾಗಿದೆ. ಇದು ಘೋರ ಅಪರಾಧವಾಗಿದ್ದು ಬಹಳಷ್ಟು ಜನರು ಇದನ್ನು ಎಸಗುತ್ತಿದ್ದಾರೆ. ನಮ್ಮ ಸೃಷ್ಟಿಕರ್ತನು, ಪರಿಪಾಲಕನು, ನಮ್ಮ ಮೇಲೆ ಅನೇಕ ಅನುಗ್ರಹಗಳನ್ನು ತೋರಿದಾತನು ಈ ಕೃತ್ಯದ ಬಗ್ಗೆ ಕಟು ಶಬ್ದಗಳಲ್ಲಿ ಎಚ್ಚರಿಕೆಯನ್ನು ನೀಡಿದ್ದಾನೆ.

ಖುರ್‌ಆನ್ ಹೇಳುತ್ತದೆ; **"ಅಲ್ಲಾಹನೊಂದಿಗೆ ಸಹಭಾಗಿಯನ್ನಾಗಿ ಮಾಡುವುದು ಮಹಾ ಅಕ್ರಮವಾಗಿದೆ"** (ಖುರ್‌ಆನ್ 31:13)

ಸೂರ್ಯ, ಚಂದ್ರ, ನಕ್ಷತ್ರಗಳು, ಮೂರ್ತಿಗಳು, ಪ್ರಾಣಿಗಳು, ಮನುಷ್ಯರು, ಸ್ವಾಮಿಗಳು, ಘೋರಿಗಳು ಮೊದಲಾದ ಸೃಷ್ಟಿಗಳನ್ನು ಆರಾಧಿಸುವುದನ್ನು ಸೃಷ್ಟಿಕರ್ತನು ನಿಷೇಧಿಸಿದ್ದಾನೆ. ಬಹುದೇವಾರಾಧನೆಯ ಈ ಪಾಪ ಕಾರ್ಯವು ಮನುಷ್ಯರನ್ನು ವಿವಿಧ ಪಂಗಡಗಳಲ್ಲಿ, ಜಾತಿಗಳಲ್ಲಿ, ಜನಾಂಗಗಳಲ್ಲಿ ವಿಂಗಡಿಸುತ್ತದೆ. ಈ ಘೋರ ಅಪರಾಧವನ್ನು ಎಂದೂ ಕ್ಷಮಿಸಲಾಗುವುದಿಲ್ಲವೆಂದು ಸೃಷ್ಟಿಕರ್ತನು ಘೋಷಿಸುತ್ತಾನೆ. ಇದು ಖುರ್‌ಆನ್‌ನ ಪಂಥಾಹ್ವಾನವಾಗಿದೆ.

ನೀವು ಖುರ್‌ಆನ್‌ನ್ನು ತೀವ್ರ ಪರಿಕ್ಷೆಗೆ ಒಳಪಡಿಸಿ ಅದನ್ನು ವಿಶ್ಲೆಷಿಸಿದರೂ ಅದರಲ್ಲಿ ಒಂದೇ ಸತ್ಯ ಹೊರ ಹೊಮ್ಮುವುದು. ಮರಣೋತ್ತರ ಜೀವನವು ಒಂದು ವಾಸ್ತವಿಕತೆಯಾಗಿದೆ. ನಿರ್ಣಾಯಕ ದಿನ, ಸ್ವರ್ಗ, ನರಕ, ಎಲ್ಲವೂ ಸತ್ಯವಾಗಿದೆ. ಸತ್ಯದ ಅನ್ವೇಷಣೆ ಮಾಡಿ ಕಾಲ ಮಿಂಚುವ ಮೊದಲು ನಮ್ಮ ಅಸ್ತಿತ್ವದ ಉದ್ದೇಶವನ್ನು ಏಕೆ ಸಫಲಗೊಳಿಸಬಾರದು?

"ಅವನು ಯಾವುದಾದರೊಂದು ವಸ್ತುವನ್ನು ಬಯಿಸಿದಾಗ ಅದಕ್ಕೆ ಆಗು ಎಂದು ಹೇಳುತ್ತಾನೆ. ಅದು ಆಗಿಬಿಡುತ್ತದೆ. ಸಕಲ ವಸ್ತುಗಳ ಮೇಲೆ ಸಂಪೂರ್ಣ ಅಧಿಕಾರವಿರುವವನು, ಪರಮ ಪಾವನನು, ಮತ್ತು ನೀವು ಅವನ ಕಡೆಗೇ ಮರಳಿಸಲ್ಪಡುವಿರಿ" (ಖುರ್‌ಆನ್ 36:82)

ಸೃಷ್ಟಿಯ ಆರಂಭ ಮಾಡುವವನೂ ಅವನೇ, ಅದರ

ಪುನರಾವರ್ತನೆ ಮಾಡುವವನೂ ಅವನೇ, ಇದು ಅವನಿಗೆ ಅತ್ಯಂತ ಸುಲಭವಾದದ್ದಾಗಿದೆ. ಭೂಮಿ ಆಕಾಶಗಳಲ್ಲಿ ಅವನ ಗುಣವು ಸರ್ವ ಶ್ರೇಷ್ಟವಾಗಿದ್ದು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

ಕಟ್ಟ ಕಡೆಗೆ, "ಪ್ರತಿಯೊಬ್ಬನಿಗೂ ಮರಣ ಹೊಂದ ಬೇಕಾಗಿದೆ ಮತ್ತು ನೀವೆಲ್ಲರೂ ನಿಮ್ಮ ನಿಮ್ಮ ಪ್ರತಿಫಲವನ್ನು ಪುನರುತ್ಥಾನ ದಿನದಂದು ಪಡೆಯುವವರಿದ್ದೀರಿ. ಯಾರು ಅಲ್ಲಿ ನರಕಾಗ್ನಿಯಿಂದ ರಕ್ಷೆ ಹೊಂದಿ ಸ್ವರ್ಗದಲ್ಲಿ ಪ್ರವೇಶಿಸಲ್ಪಡುವನೇ ನಿಜವಾಗಿಯೂ ಅವನು ಜಯಶಾಲಿಯಾದನು. ಈ ಲೋಕದ ಜೀವನವಂತೂ ಕೇವಲ ಭ್ರಮೆಭರಿತ ಸಂಪತ್ತಾಗಿದೆ" (ಖುರ್‌ಆನ್ 3:185)

ಪವಿತ್ರ ಖುರ್‌ಆನಿನ ಮುಖ್ಯವಾದ ಬೋಧನೆಯೇನು?

1) ಒಂದೇ ಕುಲ : ಪ್ರಪಂಚದಲ್ಲಿರುವ ಎಲ್ಲಾ ಮಾನವಕುಲದ ಜನಾಂಗವು ಒಂದೇ ಗಂಡು ಹೆಣ್ಣಿನಿಂದ ಹುಟ್ಟಿ ಪ್ರಪಂಚದಾದ್ಯಂತ ವ್ಯಾಪಿಸಿದ್ದಾರೆ. ನಾವು ಎಲ್ಲೇ ಇದ್ದರೂ, ಯಾವುದೇ ಭಾಷೆ ಮಾತನಾಡಿದರೂ, ನಾವೆಲ್ಲರೂ ಒಂದೇ ಕುಟುಂಬದ ಅಂಗಗಳಾಗಿದ್ದೇವೆ. ಪವಿತ್ರ ಖುರ್‌ಆನ್, **"ಮಾನವರೇ ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದ ಒಡೆಯನಿಗೆ ನಿಷ್ಠರಾಗಿರಿ ಅವನು ಅದೇ ಜೀವನದಿಂದ ಅದರ ಜೊತೆಯನ್ನೂ ಸಹ ಸೃಷ್ಟಿಸಿದನು ಮತ್ತು ಅವರಿಬ್ಬರ ಮೂಲಕ ಅನೇಕಾರು ಪುರುಷರನ್ನು ಸ್ತ್ರೀಯರನ್ನು (ಲೋಕದಲ್ಲಿ) ಹಬ್ಬಿದನು, ಯಾವ**

ಅಲ್ಲಾಹನ ಹೆಸರಿನಲ್ಲಿ ನೀವು ಹಕ್ಕುಗಳನ್ನು ಕೇಳುತ್ತೀರೊ ಅವನಿಗೆ ಸದಾ ಅಂಜಿರಿ ಮತ್ತು ಭಾಂಧವ್ಯಗಳನ್ನು ಕಾಪಾಡಿರಿ ಖಂಡಿತವಾಗಿಯೂ ಅಲ್ಲಾಹನು ನಿಮ್ಮ ಮೇಲೆ ಸದಾ ಕಣ್ಣಿಟ್ಟಿರುತ್ತಾನೆ. (ಖುರ್‌ಆನ್ 4:1)

2) **ಒಬ್ಬನೇ ದೇವನು :** ಸರ್ವ ಮಾನವ ಕುಲವನ್ನು, ಪ್ರಪಂಚವನ್ನು, ಪ್ರಪಂಚದ ಸಕಲ ಸೃಷ್ಟಿಗಳನ್ನು ಸೃಷ್ಟಿಸಿ ಪರಿಪಾಲನೆ ಮಾಡುತ್ತಿರುವ ದೇವನು ಒಬ್ಬನೆ, ಅವನು ಮಾತ್ರವೇ ಆರಾಧನೆಗೆ ಅರ್ಹನಾಗಿರುವನು. ಆ ಏಕೈಕನಾದ ಸೃಷ್ಟಿಕರ್ತನನ್ನು ಬಿಟ್ಟು ಇನ್ನುಳಿದೆಲ್ಲವೂ ಆತನ ಸೃಷ್ಟಿಗಳಾಗಿವೆ. ಅವನ ಬದಲಾಗಿ ಸೃಷ್ಟಿಗಳನ್ನು ಆರಾಧನೆ ಮಾಡುವುದು ಮತ್ತು ನಿರ್ಜೀವ ವಸ್ತುಗಳನ್ನು ಆಕೃತಿಗಳನ್ನು ತೋರಿಸಿ ದೇವರೆನ್ನುವುದು ಅತ್ಯಂತ ಘೋರ ಪಾಪ ಮತ್ತು ಮೋಸವಾಗಿದೆ. ಈ ಕೆಲಸವು ಪರಿಶುದ್ಧನಾದ ಆ ದೇವನನ್ನು ಅವಹೇಳನ ಮಾಡಿದಂತಾಗಿದೆ, ಹಾಗೂ ಅದು ಮಾನವ ಜನಾಂಗವನ್ನು ಗುಂಪು ಗುಂಪುಗಳಾಗಿ ವಿಂಗಡಿಸುವುದೇ ಆಗಿದೆ. ಹಾಗಾಗಿ ಈ ಮಹಾ ಪಾಪವನ್ನು ದೇವನು ಎಂದಿಗೂ ಮನ್ನಿಸುವುದಿಲ್ಲ.

3) ಕರ್ಮ ಫಲ ಮತ್ತು ಪರಲೋಕ ಜೀವನ: ಈ ಲೋಕದಲ್ಲಿ ದೇವನ ಅಜ್ಞೆಗಳ ಪ್ರಕಾರ ಬದುಕಿದವರಿಗೆ ಸ್ವರ್ಗವು, ಅಕ್ರಮವೆಸಗಿದ ದುಷ್ಟರಿಗೆ ನರಕದ ತೀರ್ಮ ನೀಡಲಿದ್ದಾನೆ.

ಮುಖ್ಯವಾದ ಶಬ್ದಾರ್ಥಗಳು

ಖುರ್‌ಆನ್: ಖುರ್‌ಆನ್ ಅಂತಿಮ ದೈವ ಗ್ರಂಥವಾಗಿದ್ದು ಅದು ಅಂತಿಮ ಸಂದೇಶವಾಹಕರಾದ ಮುಹಮ್ಮದ್(ಸ)ರವರ ಮೇಲೆ ಅವತೀರ್ಣಗೊಂಡಿದೆ. ಇದು ಕಿಂಚಿತ್ತೂ ಬದಲಾಗದೆ ದೇವನಿಂದ ನೇರವಾಗಿ ಬಂದಿರುವ ಶಬ್ದಭಂಡಾರವಾಗಿದೆ. ಇದು ಅಂತಿಮ ಮಾನದಂಡವಾಗಿದೆ.

ಮುಹಮ್ಮದ್(ಸ) : ಅಲ್ಲಾಹನು ತನ್ನ ಸಂದೇಶವನ್ನು ಮಾನವ ಜನಾಂಗಕ್ಕೆ ತಲುಪಿಸಲು ಮಾನವ ಜನಾಂಗದಲ್ಲೇ ಚೇತನವುಳ್ಳ ಅಥವ ಸತ್ಪುರಷರನ್ನು ನೇಮಿಸಿದನು. ಅವರು ತಮ್ಮ ಜನಾಂಗಗಳಿಗೆ ದೇವನಿಂದ ನೀಡಲ್ಪಟ್ಟ ಉಪದೇಶಗಳನ್ನು ಮಾತ್ರ ಉಪದೇಶಿಸುತ್ತಿದ್ದರು. ಸಂದೇಶವಾಹಕರ ಸಾಲಿನಲ್ಲಿ ಅಂತಿಮವಾಗಿ ಬರುವ ಸಂದೇಶವಾಹಕರೇ **ಮುಹಮ್ಮದ್(ಸ),** ಇವರ ಮುಂಚಿನ ಸಂದೇಶವಾಹಕರು ನಿಗದಿತ ಜನಾಂಗಕ್ಕಾಗಿ ಮಾತ್ರ ಬಂದಿದ್ದರು, ಆದರೆ ಮುಹಮ್ಮದ್(ಸ)ರವರು ಇಡೀ ಪ್ರಪಂಚದ ಸರ್ವ ಮಾನವ ಕುಲಕ್ಕಾಗಿ ಬಂದಿದ್ದಾರೆ.

ಶಾಂತಿ ಧಾಮ

HOUSE OF PEACE

501, 3rd cross, Syed Block,
Annasandra palya, Bangalore- 17

Mob: 9886001357 / 9886451931

Email: amkasim@yahoo.com
umaar.ischrr@gmail.com

ನಾವು ಇಲ್ಲೇಕಿದ್ದೇವೆ?

“ನಾವು ಮಾನವನನ್ನು ವೀರ್ಯಾಣುವಿನಿಂದ ಸೃಷ್ಟಿಸಿರುವುದನ್ನು ಅವನು ನೋಡುವುದಿಲ್ಲವೇ? ಮತ್ತೆ ಅವನು ಸ್ಪಷ್ಟ ಜಗಳಗಂಟನಾಗಿ ನಿಂತು ಬಿಟ್ಟನು, ಈಗ ಅವನು ನಮಗೆ ಹೋಲಿಕೆ ಕೊಡುತ್ತಾನೆ ಮತ್ತು ತನ್ನ ಸೃಷ್ಟಿಯನ್ನು ಮರೆತು ಬಿಡುತ್ತಾನೆ. ಈ ಎಲುಬುಗಳು ಶಿಥಿಲವಾಗಿ ಹೋದ ಬಳಿಕ ಇವುಗಳನ್ನು ಜೀವಂತ ಗೊಳಿಸುವವನಾರು? ಎಂದು ಕೇಳುತ್ತಾನೆ. (ಇವರಿಗೆ) ಹೇಳಿರಿ ಇವುಗಳನ್ನು ಪ್ರಥಮ ಬಾರಿ ಸೃಷ್ಟಿಸಿದವನೇ ಪುನಃ ಜೀವಂತಗೊಳಿಸುವನು. ಅವನು ಸೃಷ್ಟಿಯ ಪ್ರತಿಯೊಂದರ ಬಗೆಗೂ ಬಲ್ಲವನು”

(ಖುರ್‌ಆನ್ 36:77,78,79).